ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

## ಸ್ಪೆಷಲ್ ಕೇಸ್ ನಂಬ್ರ 17/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅರುಣ್ ರೋಡ್ರಿಗಸ್ | ಚಾಸಾಃ 1 |
| ತಂದೆಯ ಹೆಸರು | : | ವಿಕ್ಟರ್ ರೋಡ್ರಿಗಸ್ | ಪ್ರಾಸಾಃ 1 |
| ಪ್ರಾಯ | : | 45 ವರ್ಷ | **ದಿನಾಂಕಃ 22.08.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಕ್ಯಾಟರಿಂಗ್ | |
| ವಾಸಸ್ಥಳ | : | ಪಜೀರು, ಬಂಟ್ವಾಳ | |

ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ

ನಾನು ಕಳೆದ 11 ವರ್ಷದಿಂದ ಕ್ಯಾಟರಿಂಗ್ ಉದ್ಯೋಗ ಮಾಡಿಕೊಂಡಿದ್ದೇನೆ. ನನ್ನ ತಾಯಿ ವೆರೋನಿಕಾ ರೋಡ್ರಿಗಸ್ ರವರಿಗೆ ಸಂಬಂಧಿಸಿದ ಜಾಗ ಬಂಟ್ವಾಳ ತಾಲೂಕಿನ ಮೇರಮಜಲುವಿನಲ್ಲಿದೆ. ಸದರಿ ಜಾಗ ಒಂದು ಎಕರೆ ಇದ್ದು, ಅದರ ಸರ್ವೆ ನಂಬ್ರ 107/14ಹೆಚ್ ಆಗಿದೆ. ಸದರಿ ಜಾಗದ ಸರ್ವೆ ನಂಬ್ರ ತಪ್ಪಾಗಿ ಎಂಟ್ರಿಯಾದ ಕಾರಣ ಅದನ್ನು ಸರಿಪಡಿಸುವ ಅವಶ್ಯಕತೆ ಇತ್ತು. ಅದಕ್ಕಾಗಿ ನನ್ನ ತಾಯಿ ಬಂಟ್ವಾಳ ತಾಲೂಕು ತಹಶೀಲ್ದಾರ್ ಕಛೇರಿಯಲ್ಲಿ ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿಗೆ ತಹಶೀಲ್ದಾರರು ಸಹಿ ಮಾಡಿ ಸರಿಪಡಿಸಲು ಆದೇಶಿಸಿರುತ್ತಾರೆ.

2. ನಂತರ ಸದರಿ ಕಡತವನ್ನು ಬಂಟ್ವಾಳ ಕಂದಾಯ ನಿರೀಕ್ಷಕರಿಗೆ ಕಳುಹಿಸಿರುತ್ತಾರೆ. ನಾನು ಹಲವಾರು ಸಲ ಕಂದಾಯ ನಿರೀಕ್ಷಕರ ಬಳಿ ಹೋಗಿ ನಮ್ಮ ಜಾಗದ ವಿಷಯದ ಬಗ್ಗೆ ಕೇಳಿರುತ್ತೇನೆ. ಆದರೆ ಅವರು ನಾಳೆ ಬಾ, ನಾಳೆ ಬಾ ಅಂತ ಹೇಳಿ ಒಂದು ವರ್ಷದವರೆಗೆ ಸಮಯ ದೂಡಿರುತ್ತಾರೆ. ನಂತರ ಒಂದು ವರ್ಷದ ಬಳಿಕ ನಮ್ಮ ಕಡತವನ್ನು ಉಪ ತಹಶೀಲ್ದಾರ್ ರವರ ಬಳಿ ಕಳುಹಿಸಿರುತ್ತಾರೆ.

3. ನಂತರ ನಾನು ಉಪ ತಹಶೀಲ್ದಾರ್ ರವರ ಬಳಿ ಹೋಗಿ ನಮ್ಮ ಕಡತದ ಬಗ್ಗೆ ವಿಚಾಸಿರುತ್ತೇನೆ. ಆಗ ಸದರಿ ಉಪ ತಹಶೀಲ್ದಾರ್ ಹೆಸರು ನೆನಪಿಲ್ಲ, ನ್ಯಾಯಾಲಯದ ಮುಂದೆ ಇರುವ ಆರೋಪಿಯವರು ಹಣವನ್ನು ಕೇಳಿರುತ್ತಾರೆ. ನಾನು ಸದರಿ ಆರೋಪಿಗೆ ಎಷ್ಟು ಕೊಡಬೇಕು ಅಂತ ಕೇಳಲಾಗಿ, ಅವರು ಒಂದೂವರೆ ಸಾವಿರ ಕೇಳಿರುತ್ತಾರೆ. ಅದಕ್ಕೆ ನಾನು ಒಂದು ಸಾವಿರಕ್ಕೆ ಒಪ್ಪಿಕೊಂಡು ಬಂದಿರುತ್ತೇನೆ.

4. ನಾನು ಸದರಿ ವಿಷಯವನ್ನು ಎಸಿಬಿ ಪೊಲೀಸರಿಗೆ ಮಾಹಿತಿ ನೀಡಿದ್ದಕ್ಕೆ ಅವರು ರೆಕಾರ್ಡ್ ಮಾಡಿ ತರುವಂತೆ ಹೇಳಿರುತ್ತಾರೆ. ಎಸಿಬಿ ಪೊಲೀಸರು ನೀಡಿದ ರೆಕಾರ್ಡರನ್ನು ತೆಗೆದುಕೊಂಡು ನಾನು ಉಪ ತಹಶೀಲ್ದಾರ್ ರವರ ಕಛೇರಿಗೆ ಬಂದ ಬಳಿಕ, ಉಪ ತಹಶೀಲ್ದಾರ್ ರವರು ಮತ್ತೆ ಹಣದ ಬೇಡಿಕೆ ಇಟ್ಟು ಒಂದೂವರೆ ಸಾವಿರ ಕೇಳಿರುತ್ತಾರೆ. ಸದರಿ ಮಾತುಕತೆಯನ್ನು ರೆಕಾರ್ಡ್ ಮಾಡಿ ನಾನು ಎಸಿಬಿ ಕಛೇರಿಗೆ ಕೊಟ್ಟು ನಂತರ ದೂರನ್ನು ನೀಡಿರುತ್ತೇನೆ. ನಾನು ನೀಡಿದ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.**1** ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.**1(**ಎ**)** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಯನ್ನು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.

**<u>ದಿನಾಂಕಃ 22.08.2025</u>** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಮುಂದುವರಿದ ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ</u>**

5. ನನ್ನ ದೂರು ಸ್ವೀಕರಿಸಿದ ನಂತರ, ಏನು ಮಾಡಿರುತ್ತಾರೆಂದು 4 ವರ್ಷ ಆದ ಕಾರಣ ನನಗೆ ನೆನಪಿಲ್ಲ. ನಾನು ಅವರಿಗೆ ವ್ಹೊಯಿಸ್ ರೆಕಾರ್ಡರ್ ನ್ನು 25.08.2019 ರಂದು ಕಚೇರಿಯಲ್ಲಿ ನೀಡಿರುತ್ತೇನೆ.

**(ಈ ಹಂತದಲ್ಲಿ ವಿಶೇಷ ಸರಕಾರಿ ಅಭಿಯೋಜಕರು ಭಾಗಶಃ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ನ್ಯಾಯಾಲಯದ ಮುಂದಿರುವ ಕಡತ ಮತ್ತು ಸಾಕ್ಷಿಯ ಹೇಳಿಕೆಗಳನ್ನು ಗಮನಿಸಿ, ವಿಶೇಷ ಸರಕಾರಿ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದಃ</u>**

6. ನನ್ನ ದೂರು ಸ್ವೀಕರಿಸಿದ ನಂತರ ಮದ್ಯಾಹ್ನ 12 ಗಂಟೆಗೆ ಪ್ರದೀಪ್ ಕುಮಾರ್, ದ್ವಿ.ದ.ಸ ರವರಾದ ಅಧೀಕ್ಷಕರ ಇಂಜಿನಿಯರ್ ರವರ ಕಚೇರಿ ಲೋಕೊಪಯೋಗಿ ಇಲಾಖೆ ಮತ್ತು ಶ್ರೀ ಸಂತೋಷ್ ಕುಮಾರ್ ತೋಟಗಾರಿಕೆ ನಿರೀಕ್ಷಕರು ಇವರು ಎ.ಸಿ.ಬಿ ಠಾಣೆಯಲ್ಲಿ ಹಾಜರಿದ್ದು ಅವರಿಗೆ ಕಚೇರಿಯಲ್ಲಿ ಕುಳಿತಿದ್ದ ನಮ್ಮನ್ನು ಪರಸ್ಪರ ಪರಿಚಯ ಮಾಡಿಸಿರುತ್ತಾರೆ. ನಂತರ ಐ.ಓ ರವರು ನಾನು ನೀಡಿದ ಪಿರ್ಯಾದಿಯಂತೆ ದಾಖಲಾಗಿರುವ ಪ್ರಕರಣದ ವಿವರವನ್ನು ಅವರಿಗೆ ಓದಿ ಹೇಳಿರುತ್ತಾರೆ. ನಂತರ ತನಿಖಾಧಿಕಾರಿಯವರು ನಾನು ನೀಡಿದ ವ್ಹೊಯಿಸ್ ರೆಕಾರ್ಡನ್ನು ಹಾಜರುಪಡಿಸಿದ್ದು, ಅದರಲ್ಲಿ ದಿನಾಂಕ 25.11.2020 ರಂದು ನಾನು ಮತ್ತು ಆರೋಪಿ ಡೆಪ್ಯೂಟಿ ತಹಶೀಲ್ದಾರ್ ಮಾತನಾಡಿದ ಸಂಭಾಷಣೆ

ದಾಖಲಾಗಿದ್ದು ಸದರಿ ಸಂಭಾಷಣೆಯನ್ನು ಆನ್ ಮಾಡಿ ಪಂಚರಿಗೆ ಕೇಳಿಸಿದ್ದು ಅವರು ಅದನ್ನು ಕೇಳಿ ಈ ಪ್ರಕರಣಕ್ಕೆ ಪಂಚರಾಗಲು ಒಪ್ಪಿದ್ದು ನಂತರ ವೊೃಸ್ ರೆಕಾರ್ಡನಲ್ಲಿ ದಾಖಲಾದ ಸಂಭಾಷಣೆ ಇರುವ ಕಡತವನ್ನು ಲ್ಯಾಪ್ ಟಾಪ್ ಮೂಲಕ ಸಿಡಿ ಗೆ ವರ್ಗಾಯಿಸಿ ಅದಕ್ಕೆ 'C' ಅಕ್ಷರ ಸೀಲು ಮಾಡಿ ARTICLE NO.1 ಎಂದು ಗುರುತು ನೀಡಿ ಅದಕ್ಕೆ ನಾನು, ಪಂಚರು ಮತ್ತು ಐ.ಒ ರವರು ಸಹಿ ಇರುವ ಚೀಟಿ ಅಂಟಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸದರಿ ಕವರಿನಲ್ಲಿರುವ ಚೀಟಿಯ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಬ್ರೌನ್ ಬಣ್ಣದ ಕವರನ್ನು ತೆರೆದ ನ್ಯಾಯಾಲಯದಲ್ಲಿ ಅನುಮತಿ ಮೇರೆಗೆ ತೆಗೆದು ನೋಡಲಾಗಿ ಅದರಲ್ಲಿರುವ ಸಿಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಿಡಿಯನ್ನು **ನಿಪಿ-2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು.

7. ನಾನು ಆರೋಪಿತರಿಗೆ ಲಂಚವಾಗಿ ಕೊಡಲು ತಂದಿದ್ದ ರೂ.1,000 ರವರಿಗೆ ತನಿಖಾಧಿಕಾರಿಯವರ ಟೇಬಲ್ ಮೇಲೆ ಹಾಜರುಪಡಿಸಿದ್ದು ಅದರಲ್ಲಿ ರೂ.500 ಮುಖಬೆಲೆಯ ಒಂದು ನೋಟು, ರೂ.200 ಮುಖಬೆಲೆಯ 2ನೋಟುಗಳು ಮತ್ತು ರೂ100 ಮುಖಬೆಲೆಯ ಒಂದು ನೋಟು ಇದ್ದವು ಎಂದರೆ ಸರಿ. ಸದರಿ ನೋಟುಗಳನ್ನು ಪಂಚ-2 ರವರು ಪರಿಶೀಲಿಸಿ ಪಂಚ-1 ರವರು ನೋಟಿನ ಮೌಲ್ಯ ಮತ್ತು ಕ್ರಮಸಂಖ್ಯೆಯನ್ನು ಬಿಳಿ ಹಾಳೆಯಲ್ಲಿ ನಮೂದಿಸಿರುತ್ತಾರೆ . ನಂತರ ಹೆಚ್.ಸಿ ರಾಧಕೃಷ್ಣ ಕೆ ರವರು, ನಾನು ಹಾಜರುಪಡಿಸಿದ ನೋಟುಗಳಿಗೆ ತೆಳುವಾಗಿ ಫೆನೊಪ್ತಲಿನ್ ಪುಡಿಯನ್ನು ಸವರಿರುತ್ತಾರೆ. ನಂತರ ಹೆಚ್ .ಸಿ ಹರಿಪ್ರಸಾದ್ ರವರು ಒಂದು ಪ್ಲಾಸ್ಟಿಕ್ ಮಗ್ ನಲ್ಲಿ ಶುದ್ದವಾದ ನೀರಿಗೆ ಸೋಡಿಯಂ ಕಾರ್ಬೋನೇಟ್ ಪುಡಿಯನ್ನುಬೆರೆಸಿ ದ್ರಾವಣವನ್ನು ತಯಾರಿಸಿರುತ್ತಾರೆ. ಸದರಿ ದ್ರಾವಣದ ಸದರಿ ದ್ರಾವಣದ ಮಾದರಿಯನ್ನು ಒಂದು ಬಾಟಲಿನಲ್ಲಿ ಶೇಖರಿಸಿ ಮುಚ್ಚಳ ಹಾಕಿ ARTICLE 2 ಎಂದು ಗುರುತಿಸಿರುತ್ತಾರೆ. ಉಳಿದ ದ್ರಾವಣವನ್ನು ಒಂದುಪ್ಲಾಸ್ಟಿಕ್ ಬಾಟಲಿನಲ್ಲಿ ಹಾಕಿರುತ್ತಾರೆ. ಸಾಕ್ಷಿ ಸದರಿ ದ್ರಾವಣ ಇರುವ ಬಾಟಲಿಯನ್ನು ಮತ್ತು ಅದರಲ್ಲಿ ಅಂಟಿಸಿರುವ ಚೀಟಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ಬಾಟಲಿಯನ್ನು **ಎಂ.ಒ-1** ಮತ್ತು ಸಾಕ್ಷಿಯ

ಸಹಿಯನ್ನು **ಎಂ.ಒ-1(ಎ)** ಎಂದು ಗುರುತಿಸಲಾಯಿತು. ನಂತರ ಪಂಚ-2 ರವರು ನಾನು ಹಾಜರುಪಡಿಸಿದ್ದ ಫೆನೊಪ್ತಲಿನ್ ಪುಡಿಯನ್ನು ಸವರಿದ ನೋಟುಗಳನ್ನು ತನ್ನ ಬಲಗೈಯಿಂದತೆಗೆದುಕೊಂಡು ಎರಡು ಕೈಗಳಿಂದ ಎಣಿಸಿ, ಐ.ಒ ರವರ ಟೇಬಲ್ ಮೇಲೆ ಇಟ್ಟರು. ನಂತರ ಅವರು ಪ್ಲಾಸ್ಟಿಕ್ ಬಟ್ಟಲಿನಲ್ಲಿ ಉಳಿದಿದ್ದ ಬಣ್ಣವಿಲ್ಲದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತನ್ನ ಎರಡು ಕೈಗಳ ಬೆರಳುಗಳನ್ನು ಅದ್ದಿ ತೊಳೆದಾಗ ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಸದರಿ ದ್ರಾವಣವನ್ನು ಒಂದು ಬಾಟಲಿನಲ್ಲಿ ಶೇಖರಿಸಿ ಮುಚ್ಚಳ ಹಾಕಿ ARTICLE 3 ಎಂದು ಗುರುತಿಸಿರುತ್ತಾರೆ. ಸಾಕ್ಷಿ ಸದರಿ ದ್ರಾವಣ ಇರುವ ಬಾಟಲಿಯನ್ನು ಮತ್ತು ಅದರಲ್ಲಿ ಅಂಟಿಸಿರುವ ಚೀಟಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ಬಾಟಲಿಯನ್ನು **ಎಂ.ಒ-2** ಮತ್ತು ಸಾಕ್ಷಿಯ ಸಹಿಯನ್ನು **ಎಂ.ಒ-2(ಎ)** ಎಂದು ಗುರುತಿಸಲಾಯಿತು.

8. ನಂತರ ಅಲ್ಲಿ ತನಿಖಾಧಿಕಾರಿಯವರ ಆದೇಶದ ಮೇರೆಗೆ ಪಂಚ-2 ರವರು ನನ್ನ ಅಂಗಶೋಧನೆ ಮಾಡಿದ್ದು ಅವರಿಗೆ ನನ್ನ ಬಳಿ ಇದ್ದ ಮೊಬೈಲ್ ಫೋನ್ ಮತ್ತು ಪರ್ಸ್ ಇದ್ದು ಲಂಚವಾಗಿ ಕೊಡಲು ಇಟ್ಟಿದ್ದ ಫಿನಾಪ್ತಲಿನ್ ಪುಡಿ ಸವರಿದ ರೂ 1,000 ಹಣವನ್ನು ಪಂಚ-2 ರವರು ನಾನು ಧರಿಸಿದ್ದ ಶರ್ಟ್ ನ ಎಡಗಡೆಯ ಕಿಸೆಯಲ್ಲಿ ಇಟ್ಟರು. ನಂತರ ನನ್ನಿಂದ ದ ಫಿನಾಪ್ತಲಿನ್ ಪುಡಿಯನ್ನು ಸವರಿರುವ ನೋಟುಗಳನ್ನು ಆರೋಪಿಯು ತನ್ನ ಕೈಗಳಿಂದ ಸ್ವೀಕರಿಸಿದರೆ ಮತ್ತು ಅವರ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದರೆ ಆ ದ್ರಾವಣ ಗುಲಾಬಿ ಬಣ್ಣಕ್ಕೆ ಬದಲಾವಣೆ ಯಾದರೆ ಅದು ಆರೋಪಿಯು ಲಂಚದ ಹಣ ಸ್ವೀಕರಿಸಿರುವುದಾಗಿ ಖಚಿತವಾಗುತ್ತದೆ ಎಂದು ಐ.ಒ ರವರು ವಿವರಿಸಿರುತ್ತಾರೆ. ವಹಿಸುವಿಕೆ ಪಂಚನಾಮೆ ಮಾಡಿದ ಸಮಯದಲ್ಲಿ ತೆಗೆದ ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ 14 ಪೋಟೋಗಳನ್ನು **ನಿಪಿ-3(14)** ಎಂದು ಗುರುತಿಸಲಾಯಿತು. ಸಾಕ್ಷಿ ಕೆಲವು ಪೋಟೋಗಳನ್ನು ತನ್ನ ಇರುವಿಕೆಯನ್ನು ಗುರುತಿಸುತ್ತಾರೆ. ಸದರಿ ಪಂಚನಾಮೆಗೆ ತಾನು ಸಹಿ ಮಾಡಿದ್ದು, ಸಾಕ್ಷಿ ಅದನ್ನು ಗುರುತಿಸಿದ ಮೇರೆಗೆ ಸದರಿ ಪಂಚನಾಮೆಯನ್ನು **ನಿಪಿ-4** ಎಂದು , ಸಾಕ್ಷಿಯ ಸಹಿಯನ್ನು **ನಿಪಿ-4(ಎ)** ಎಂದು ಗುರುತಿಸಲಾಯಿತು.

9. ನಂತರ ಮದ್ಯಾಹ್ನ 1.45 ಗಂಟೆಗೆ ಸರ್ಕಾರಿ ವಾಹನದಲ್ಲಿ ನಾನು, ತನಿಖಾಧಿಕಾರಿಯವರು, ಪಂಚರು ಮತ್ತು ಸಿಬ್ಬಂದಿಗಳು ತನಿಖಾ ಸಾಮಾಗ್ರಿಗಳೊಂದಿಗೆ ಬಂಟ್ವಾಳದ ಮಿನಿ ವಿಧಾನಸೌದದ ಕಡೆಗೆ ಹೊರಟಿರುತ್ತೇವೆ. ಮದ್ಯಾಹ್ನ 2.25 ಗಂಟೆಗೆ ತಲುಪಿರುತ್ತೇವೆ. ಅಲ್ಲಿ ತನಿಖಾಧಿಕಾರಿಯವರು ನನಗೆ ಮತ್ತು ಪಂಚ-1 ರವರಿಗೆ ವಹಿಸುವಿಕೆ ಪಂಚನಾಮೆಯಲ್ಲಿ ಬರೆದ ಸೂಚನೆಯನ್ನು ಪಾಲಿಸುವಂತೆ ಹೇಳಿದ್ದು ಮತ್ತು ಆರೊಪಿಗೆ ಲಂಚದ ಹಣ ಕೊಡುವಾಗ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಲು ವ್ಹೊಯ್ಸ್ ರೆಕಾರ್ಡರನ್ನು ನನಗೆ ನೀಡಿ ಪಂಚ-1 ಮತ್ತು ನನ್ನನ್ನು ಆರೋಪಿಯ ಕಚೇರಿಗೆ ಕಳುಹಿಸಿರುತ್ತಾರೆ. ಅದರಂತೆ ನಾನು ಮತ್ತು ಪಂಚ-1 ರವರು ಆರೋಪಿಯ ಕಚೇರಿಯ ಬಳಿ ಬಂದಾಗ ಆರೋಪಿ ಡೆಪ್ಯೂಟಿ ತಹಶೀಲ್ದಾರ್ ಕಚೇರಿಯಲ್ಲಿ ಇರಲಿಲ್ಲ. ಕಚೇರಿಯ ಕ್ಲರ್ಕ್ ನಲ್ಲಿ ವಿಚಾರಿಸಲಾಗಿ ಆರೋಪಿ ಈಗ ಬರುತ್ತಾರೆ ಎಂದು ತಿಳಿಸಿರುತ್ತಾರೆ. ನಾವು ಕಚೇರಿಯಿಂದ ಹೊರಗೆ ಬರುವಾಗ, ಆರೋಪಿ ತಮ್ಮ ಕಚೇರಿಯ ಕೊಠಡಿಗೆ ಬಂದಿದ್ದು ನಾನು ಆರೋಪಿ ಬಳಿ ಹೋಗಿ ನಮಸ್ಕಾರ ಸರ್ ಮೊನ್ನೆ ಬಂದಿದ್ದು ಎಂದು ಹೇಳಿ ಲಂಚವಾಗಿ ಕೊಡಬೇಕಾದ ರೂ.1,000 ಹಣವನ್ನು ಆರೋಪಿಯವರ ಕೈಯಲ್ಲಿ ಕೊಟ್ಟೆನು ಎಂದರೆ ಸರಿ. ಅವರು ಲಂಚದ ಹಣವನ್ನು ತನ್ನ ಬಲಗೈಯಲ್ಲಿ ತೆಗೆದುಕೊಂಡು, ನಂತರ ಎಡಗೈಯಲ್ಲಿ ಹಿಡಿದು ಬಲಗೈಯಿಂದ ತನ್ನ ಪ್ಯಾಂಟಿನ ಹಿಂದೆ ಬಲಬದಿಯ ಕಿಸೆಯಲ್ಲಿದ್ದ ಪರ್ಸ ನ್ನು ತೆಗೆದು ಸದರಿ ಹಣವನ್ನು ಆ ಪರ್ಸ್ ನ ಒಳಗೆ ಇಟ್ಟುಕೊಂಡರು. ನಂತರ ನಾನು ಹೊರಗೆ ಬಂದು ತನಿಖಾಧಿಕಾರಿಯವರ ಮೊಬೈಲ್ ಗೆ ಕರೆ ಮಾಡಿ ಆರೋಪಿಯು ಲಂಚದ ಹಣ ಸ್ವೀಕರಿಸಿದ ಬಗ್ಗೆ ಸೂಚನೆ ನೀಡಿರುತ್ತೇನೆ. ಆಗ ತನಿಖಾಧಿಕಾರಿಯವರು, ಪಂಚ-2 ಮತ್ತು ಇತರ ಸಿಬ್ಬಂದಿಗಳು ಆರೋಪಿಯ ಕಚೇರಿಗೆ ಬಂದು, ಕೊಠಡಿಯ ಹೊರಗಡೆ ತನಿಖಾಧಿಕಾರಿಯವರಿಗೆ ನಾನುಸಿಕ್ಕಿದ್ದು, ಅವರು ನನ್ನಲ್ಲಿದ್ದ ವ್ಹೊಯ್ಸ್ ರೆಕಾರ್ಡರನ್ನು ಪಡೆದು ಓಪ್ ಮಾಡಿ ನನ್ನನ್ನು ವಿಚಾರಿಸಿರುತ್ತಾರೆ. ಆ ಸಮಯದಲ್ಲಿ ನ ಡೆದ ವಿಚಾರವನ್ನು ನಾನು ಐ.ಒ ರವರಿಗೆ ಹೇಳಿರುತ್ತೇನೆ. ನಂತರ ನಾವೆಲ್ಲರೂ ಆರೋಪಿಯ ಕಚೇರಿಗೆ ಬಂದಿದ್ದು, ಕೊಠಡಿಯ ಒಳಗಹೆ

ಕುರ್ಚಿಯಲ್ಲಿ ಕುಳಿತಿದ್ದ ಆರೋಪಿಯನ್ನು ಐ,ಒ ರವರಿಗೆ ತೋರಿಸಿ ಇವರೇ ನನ್ನಿಂದ ಲಂಚ ಹಣವನ್ನು ಪಡೆದವರು ಎಂದು ಹೇಳಿರುತ್ತೇನೆ. ಆಗ ಐ.ಒ ರವರು ತಮ್ಮ ಗುರುತಿನ ಚೀಟಿಯನ್ನು ಆರೋಪಿಗೆ ತೋರಿಸಿ ಪರಿಚಯಿಸಿಕೊಂಡಿರುತ್ತಾರೆ. ಆಗ ತನಿಖಾಧಿಕಾರಿಯವರು ಆರೋಪಿಯನ್ನು ವಿಚಾರಿಸಿದ್ದು ತನ್ನ ವಿವರವನ್ನು ಅವರು ಹೇಳಿದ್ದು, ಆಗ ಐ.ಒ ರವರು ನನ್ನನ್ನು ಆರೋಪಿಗೆ ತೋರಿಸಿ ಇವರ ಪರಿಚಯವಿದೆಯಾ ಎಂದು ಕೇಳಿದಾಗ, ಆರೋಪಿಯು ಹೌದು, ಅವರು ಅವರ ತಾಯಿಯ ಹೆಸರಿನಲ್ಲಿರುವ ಸರ್ವೇ ನಂಬ್ರ ತಿದ್ದುಪಡಿ ಮಾಡಲು ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಆರೋಪಿಗೆ ನನ್ನ ತಾಯಿಯ ಹೆಸರಿನಲ್ಲಿರುವ ಸರ್ವೇ ನಂಬರ್ ತಿದ್ದುಪಡಿ ಮಾಡಲು ಲಂಚ ಕೇಳಿದರ ಬಗ್ಗೆ ನಾನು ದೂರು ಕೊಟ್ಟಿದ್ದು ಅದಕ್ಕೆ ಸಹಕರಿಸಲು ಕೋರಿರುತ್ತಾರೆ.

10. ನಂತರ ಹರಿಪ್ರಸಾದ್ ರವರು ಒಂದು ಪ್ಲಾಸ್ಟಿಕ್ ಮಗ್ ನಲ್ಲಿ ಶುದ್ದವಾದ ನೀರಿಗೆ ಸೋಡಿಯಂ ಕಾರ್ಬೋನೇಟ್ ಪುಡಿ ಹಾಕಿ ದ್ರಾವಣವನ್ನು ತಯಾರಿಸಿರುತ್ತಾರೆ ಮತ್ತು ಸದರಿ ದ್ರಾವಣದ ಒಂದು ಅಂಶವನ್ನು ಒಂದು ಬಾಟಲಿನಲ್ಲಿ ಹಾಕಿ ಮುಚ್ಚಳ ಹಾಕಿ ಶೇಖರಿಸಿದ್ದು ಅದರಲ್ಲಿ ಚೀಟಿಯನ್ನು ಅಂಟಿಸಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ದ್ರಾವಣವನ್ನು ARTICLE 4 ಎಂದು ಗುರುತಿಸಿರುತ್ತಾರೆ. ಸಾಕ್ಷಿ ಸದರಿ ದ್ರಾವಣ ಇರುವ ಬಾಟಲಿಯನ್ನು ಮತ್ತು ಅದರಲ್ಲಿ ಅಂಟಿಸಿರುವ ಚೀಟಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ಬಾಟಲಿಯನ್ನು **ಎಂ.ಒ-3** ಮತ್ತು ಸಾಕ್ಷಿಯ ಸಹಿಯನ್ನು **ಎಂ.ಒ-3(ಎ)** ಎಂದು ಗುರುತಿಸಲಾಯಿತು. ಉಳಿದ ದ್ರಾವಣವನ್ನು ಎರಡು ಬಟ್ಟಲಿನಲ್ಲಿ ಹಾಕಿ ಒಂದನೇ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಆರೋಪಿಯ ಬಲಗೈಯ ಬೆರಳುಗಳನ್ನು ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬದಲಾಗಿರುತ್ತದೆ. ಅದನ್ನು ಬಾಟಲಿನಲ್ಲಿ ಹಾಕಿ ಮುಚ್ಚಳ ಹಾಕಿ ಶೇಖರಿಸಿದ್ದು ಅದರಲ್ಲಿ ಚೀಟಿಯನ್ನು ಅಂಟಿಸಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ದ್ರಾವಣವನ್ನು ARTICLE 5 ಎಂದು ಗುರುತಿಸಿರುತ್ತಾರೆ. ಸಾಕ್ಷಿ ಸದರಿ ದ್ರಾವಣ ಇರುವ ಬಾಟಲಿಯನ್ನು ಮತ್ತು ಅದರಲ್ಲಿ ಅಂಟಿಸಿರುವ ಚೀಟಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ಬಾಟಲಿಯನ್ನು

**ಎಂ.ಒ-4** ಮತ್ತು ಸಾಕ್ಷಿಯ ಸಹಿಯನ್ನು **ಎಂ.ಒ-4(ಎ)** ಎಂದು ಗುರುತಿಸಲಾಯಿತು. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಆರೋಪಿಯ ಎಡಗೈಯ ಬೆರಳುಗಳನ್ನು ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬದಲಾಗಿರುತ್ತದೆ. ಅದನ್ನು ಬಾಟಲಿನಲ್ಲಿ ಹಾಕಿ ಮುಚ್ಚಳ ಹಾಕಿ ಶೇಖರಿಸಿದ್ದು ಅದರಲ್ಲಿ ಚೀಟಿಯನ್ನು ಅಂಟಿಸಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ದ್ರಾವಣವನ್ನು ARTICLE 6 ಎಂದು ಗುರುತಿಸಿರುತ್ತಾರೆ. ಸಾಕ್ಷಿ ಸದರಿ ದ್ರಾವಣ ಇರುವ ಬಾಟಲಿಯನ್ನು ಮತ್ತು ಅದರಲ್ಲಿ ಅಂಟಿಸಿರುವ ಚೀಟಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ಬಾಟಲಿಯನ್ನು **ಎಂ.ಒ-5** ಮತ್ತು ಸಾಕ್ಷಿಯ ಸಹಿಯನ್ನು **ಎಂ.ಒ-5(ಎ)** ಎಂದು ಗುರುತಿಸಲಾಯಿತು.

11. ನಂತರ ನಾನು ಕೊಟ್ಟ ಲಂಚದ ಹಣವನ್ನು ಹಾಜರುಪಡಿಸುವಂತೆ ಐ.ಒ ರವರು ಆರೋಪಿಗೆ ಕೇಳಿದಾಗ ಅವರು ಸದರಿ ಹಣವನ್ನು ತಾನು ಧರಿಸಿದ್ದ ಪ್ಯಾಂಟಿನ ಹಿಂಬದಿಯ ಬಲಬದಿಯ ಕಿಸೆಯಲ್ಲಿದ್ದ ಪರ್ಸ್ನಿಂದ ತೆಗೆದು ಕೊಟ್ಟಿರುತ್ತಾರೆ. ಸದರಿ ಹಣವನ್ನು ತನಿಖಾಧಿಕಾರಿಯವರ ಸೂಚನೆಯಂತೆ ಪಡೆದು, ಪಂಚ-2 ರವರು ಚೀಟಿಯಲ್ಲಿದ್ದ ವಿವರಗಳಿಗೆ ತಾಳೆ ಮಾಡಿ ನೋಡಲಾಗಿ, ಅದರಲ್ಲಿ ರೂ.500 ಮುಖಬೆಲೆಯ ಒಂದು ನೋಟು, ರೂ.200 ಮುಖಬೆಲೆಯ 2ನೋಟುಗಳು ಮತ್ತು ರೂ100 ಮುಖಬೆಲೆಯ ಒಂದು ನೋಟು ಇದ್ದವು ಮತ್ತು ಸದರಿ ನೋಟುಗಳ ಮೌಲ್ಯ ಮತ್ತು ಕ್ರಮಸಂಖ್ಯೆ ಸರಿಯಾಗಿರುತ್ತದೆ ಎಂದು ಪಂಚರು ತಿಳಿಸಿರುತ್ತಾರೆ. ಸದರಿ ನೋಟುಗಳನ್ನು ಒಂದು ಕವರಿನಲ್ಲಿ ಹಾಕಿ ಐ.ಒ ರವರು ವಶಪಡಿಸಿಕೊಂಡಿರುತ್ತಾರೆ. ಬ್ರೌನ್ ಬಣ್ಣದ ಕವರನ್ನು ತೆರೆದ ನ್ಯಾಯಾಲಯದಲ್ಲಿ ಅನುಮತಿ ಮೇರೆಗೆ ತೆಗೆದು ನೋಡಲಾಗಿ ಅದರಲ್ಲಿ ರೂ.500 ಮುಖಬೆಲೆಯ ಒಂದು ನೋಟು, ರೂ.200 ಮುಖಬೆಲೆಯ 2ನೋಟುಗಳು ಮತ್ತು ರೂ100 ಮುಖಬೆಲೆಯ ಒಂದು ನೋಟು ಇದ್ದು, ಸಾಕ್ಷಿ ಸದರಿ ನೋಟುಗಳನ್ನುನೋಡಿ ಗುರುತಿಸಿದ್ದು ಅವುಗಳನ್ನು **ಎಂ.ಒ-6** ಎಂದು, ಸಾಕ್ಷಿಯ ಸಹಿಯನ್ನು **ಎಂ.ಒ-6(ಎ)** ಎಂದು ಗುರುತಿಸಲಾಯಿತು.

12. ಆರೋಪಿಗೆ ಪರ್ಸನ್ನು ಹಾಜರುಪಡಿಸಲು ಹೇಳಿದ್ದು ಅದು Fast track ಕಂಪನಿಯಾಗಿದ್ದು ಅದರಲ್ಲಿ ನೋಟುಗಳನ್ನು ಇಟ್ಟಿದ್ದ ಜಾಗವನ್ನು ಗುರುತು ಮಾಡಿರುತ್ತಾರೆ. ನಂತರ ಸದರಿ ಜಾಗವನ್ನು ಒಂದು ಬಿಳಿ ಬಟ್ಟೆಯಲ್ಲಿ ಒರೆಸಿ, ಸದರಿ ಬಟ್ಟೆ ಮತ್ತು ಪರ್ಸನ್ನು ತನಿಖಾಧಿಕಾರಿಯವರು ನಮ್ಮ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ. ಬ್ರೌನ್ ಬಣ್ಣದ ಕವರುಗಳನ್ನು ತೆರೆದ ನ್ಯಾಯಾಲಯದಲ್ಲಿ ಅನುಮತಿ ಮೇರೆಗೆ ತೆಗೆದು ನೋಡಲಾಗಿ ಅದರಲ್ಲಿ ಬಿಳಿ ಬಣ್ಣದ ಒಂದು ಬಟ್ಟೆಯ ತುಂಡು ಮತ್ತು ಬ್ರೌನ್ ಬಣ್ಣದ ಪರ್ಸ್ ಇದ್ದು, ಸಾಕ್ಷಿ ಅವುಗಳನ್ನುನೋಡಿ ಗುರುತಿಸಿದ್ದು ಅವುಗಳನ್ನು **ಎಂ.ಒ-7 ಮತ್ತು 8** ಎಂದು, ಅವುಗಳ ಮೇಲೆ ಅಂಟಿಸಿದ ಚೀಟಿಯ ಮೇಲಿರುವ ಸಾಕ್ಷಿಯ ಸಹಿಗಳನ್ನು **ಎಂ.ಒ-7(ಎ) ಮತ್ತು 8(ಎ)** ಎಂದು ಗುರುತಿಸಲಾಯಿತು.

13. ಮಹಜರು ಮಾಡಿದ ಸಮಯದಲ್ಲಿ ಆರೋಪಿಯು ತನ್ನ ಸಮಜಾಯಿಷಿಯನ್ನು ಬರೆದು ಕೊಟ್ಟಿರುತ್ತಾರೆ. ಅದಕ್ಕೆ ನಾನು, ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿ, ನಂತರ ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಯವರು ಅವರ ಬಳಿ ಇದ್ದ ವ್ಲೊೈಸ್ ರೆಕಾರ್ಡರ್ ನ್ನು ಓನ್ ಮಾಡಿ ನಮಗೆ ಮತ್ತು ಪಂಚರಿಗೆ ಕೇಳಿಸಿದ್ದು, ಅದರಲ್ಲಿ 3.49 ನಿಮಿಷಗಳ ಟ್ರ್ಯಾಪ್ ಕಾಲದಲ್ಲಿ ನಾನು ಮತ್ತು ಆರೋಪಿ ಮಾತನಾಡಿದ ಸಂಭಾಷಣೆ ಇದ್ದು ಸದರಿ ಸಂಭಾಷಣೆಯನ್ನು ಸಿಡಿಗೆ ವರ್ಗಾಯಿಸಿ ಒಂದು ಕವರಿನಲ್ಲಿ ಹಾಕಿ ಅದಕ್ಕೆ 'C' ಎಂದು ಗುರುತು ಮಾಡಿ ನನ್ನ ಮತ್ತು ಪಂಚರ ಸಹಿಯನ್ನು ಚೀಟಿಯ ಮೇಲೆ ಪಡೆದು ಅಂಟಿಸಲಾಗಿರುತ್ತದೆ. ಬ್ರೌನ್ ಬಣ್ಣದ ಕವರನ್ನು ತೆರೆದ ನ್ಯಾಯಾಲಯದಲ್ಲಿ ಅನುಮತಿ ಮೇರೆಗೆ ತೆಗೆದು ನೋಡಲಾಗಿ ಅದರಲ್ಲಿರುವ ಸಿಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಿಡಿಯನ್ನು **ನಿಪಿ-5** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-5(ಎ)** ಎಂದು ಗುರುತಿಸಲಾಯಿತು.

14. ಐ.ಒ ರವರು ನನ್ನ ಕೆಲಸದ ಬಗ್ಗೆ ಇದ್ದ ಕಡತವನ್ನು ಆರೋಪಿಯ ಬಳಿ ನಂತರ ವಿಚಾರಿಸಲಾಗಿ, ಅದು ದಿನಾಂಕ 25.11.2020 ರಂದು ಸಹಿ ಮಾಡಿ

ಟಪಾಲು ವಿಭಾಗಕ್ಕೆ ಕಳುಹಿಸಿರುವುದಾಗಿ ತಿಳಿಸಿರುತ್ತಾರೆ. ನಂತರ ಐ.ಒ ರವರು ಬಂಟ್ವಾಳ ತಹಶೀಲ್ದಾರ್ ರ ಮೊಬೈಲ್ ಗೆ ಕರೆ ಮಾಡಿ ಪ್ರಕರಣ ದಾಖಲಾದ ಬಗ್ಗೆ ಮಾಹಿತಿ ನೀಡಿ, ನನ್ನ ಕೆಲಸಕ್ಕೆ ಸಂಬಂಧಪಟ್ಟ ಕಡತವನ್ನು ಹಾಜರುಪಡಿಸುವಂತೆ ತಿಳಿಸಿದ್ದು ಅವರು ಕಚೇರಿ ಸಿಬ್ಬಂದಿಯ ಮೂಲಕ ಕಡತವನ್ನು ಹಾಜರುಪಡಿಸಿರುತ್ತಾರೆ. ನಂತರ ತಹಶೀಲ್ದಾರ್ ರಾಜೇಶ್ ರವರು ಸದರಿ ದಾಖಲೆಗಳನ್ನು ಸರ್ಟಿಫೈ ಮಾಡಿ ನನ್ನ ಮತ್ತು ಪಂಚರ ಸಹಿಗಳನ್ನು ಪಡೆದಿರುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ಕಡತದ ದಾಖಲೆಗಳನ್ನು **ನಿಪಿ-6** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಲಾಯಿತು. ಅದು ಪುಟ ಸಂಖ್ಯೆ 114 ರಿಂದ 155 ಇರುತ್ತದೆ.

15. ನಂತರ ಅವರು ಹಾಜರಾತಿ ಪುಸ್ತಕ 2019-20, ಕಂದಾಯ ನಿರೀಕ್ಷಕರಿಗೆ ನೀಡುವ ಟಪಾಲು ವಹಿ, ಖಾತಾ ಬದಲಾವಣೆ ವಹಿ, ಹಾಗೂ ಉಪತಹಶೀಲ್ದಾರ್ ಪಾಣೆ ಮಂಗಳೂರು ನಾಡ ಕಚೇರಿ ಹೆಚ್ಚುವರಿ ಪ್ರಭಾರದ ಬಗ್ಗೆ ಕಚೇರಿಯ ಆದೇಶಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳನ್ನು ಚುನಾವಣಾ ಶಾಖೆಯ ಡೆಪ್ಯೂಟಿ ತಹಶೀಲ್ದಾರ್ ರಾಜೇಶ್ ರವರು ದೃಢೀಕರಿಸಿದ್ದು, ಅದನ್ನು ತನಿಖಾಧಿಕಾರಿಯವರು ಜಪ್ತಿಪಡಿಸಿಕೊಂಡಿರುತ್ತಾರೆ.

16. ನಾನು ಮತ್ತು ಆರೋಪಿ ಮಾಡಿದ ಸಂಭಾಷಣೆಯನ್ನು ಪ್ಲೇ ಮಾಡಿ ಡೆಪ್ಯೂಟಿ ತಹಶೀಲ್ದಾರ್ ರಾಜೇಶ್ ರವರಿಗೆ ಕೇಳಿಸಲಾಗಿ, ಅವರು ಒಂದು ಧ್ವನಿಯನ್ನು ಡೆಪ್ಯೂಟಿ ತಹಶೀಲ್ದಾರ್ ರವಿಶಂಕರ್ (ಆರೋಪಿ) ರವರ ಧ್ವನಿ ಎಂದು ಗುರುತಿಸಿರುತ್ತಾರೆ. ಆ ಸಮಯದಲ್ಲಿ ಮಾಡಿದ ಟ್ರ್ಯಾಪ್ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ-7 ಎಂದು ,** ಸಾಕ್ಷಿಯ ಸಹಿಯನ್ನು **ನಿಪಿ-7(ಎ)** ಎಂದು ಗುರುತಿಸಲಾಯಿತು. ಟ್ರ್ಯಾಪ್ ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ 14 ಫೋಟೊಗಳನ್ನು **ನಿಪಿ-8(14)** ಎಂದು ಗುರುತಿಸಲಾಯಿತು. ಸಾಕ್ಷಿ ಅದರಲ್ಲಿರುವ ಕೆಲವು ಫೋಟೊಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸುತ್ತಾರೆ.

17. ದಿನಾಂಕ 25.11.2020 ರಂದು ಆರೋಪಿಯೊಂದಿಗೆ ಮೊದಲು ಮಾಡಿದ ಸಂಭಾಷಣೆಯನ್ನು ಕೇಳಿಸಿದಲ್ಲಿ ನಾನು ಅವರ ಧ್ವನಿಯನ್ನು ಗುರುತಿಸುತ್ತೇನೆ. ನಿಪಿ-2 ಮತ್ತು ನಿಪಿ-5 ರ ಸಿಡಿಗಳನ್ನು ನ್ಯಾಯಾಲಯದ ಮುಂದೆ ಲೋಕಾಯುಕ್ತ ಕಚೇರಿಯ ಲ್ಯಾಪ್ ಟಾಪ್ ನಲ್ಲಿ ನ್ಯಾಯಾಲಯದ ಅನುಮತಿ ಮೇರೆಗೆ ಪ್ಲೇ ಮಾಡಿ ಕೇಳಿಸಲಾಗಿ, ಸದರಿ ಎರಡು ಸಿಡಿಗಳಲ್ಲಿರುವ ಸಂಭಾಷಣೆಯಲ್ಲಿ ತನ್ನ ಮತ್ತು ಆರೋಪಿಯ ಧ್ವನಿಯನ್ನು ಗುರುತಿಸಿರುತ್ತಾರೆ. ಈ ಬಗ್ಗೆ ನಾನು ತನಿಖಾಧಿಕಾರಿಯವರಿಗೆ ದಿನಾಂಕ 27.11.2020 ರಂದು ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು, ಆತನ ಪರ ವಕೀಲರು ಗೈರು ಹಾಜರಾತಿ ಅರ್ಜಿ ಸಲ್ಲಿಸಿದ್ದು, ಆತನ ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.